(ಸದನವು ಮಧ್ಯಾಹ್ನ ಒಂದು ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2.40 ಗಂಟೆಗೆ ಸೇರಲು .ನಿಶ್ಚಯಿಸಿತು.)

(ಸಭೆಯ 3-00 ಗಂಟೆಗೆ ಪುನಃ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠದಲ್ಲಿದ್ದರು)

ಆ) ವಿಧಾನ ಪರಿಷತ್ ಸಭಾಪತಿಯವರಿಂದ ಬಂದ ಸಂದೇಶ

ಅಧ್ಯಕ್ಷರು:- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ ಈ ಕೆಳಕಂಡ ತಿದ್ದುಪಡಿ ವಿಧೇಯಕಗಳನ್ನು ದಿನಾಂಕ 4-2-05ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

i) 2005ನೇ ಸಾಲಿನ ವಿದ್ಯುಚ್ಛಕ್ತಿ ಕರ್ನಾಟಕ (ತಿದ್ದುಪಡಿ)ವಿಧೇಯಕ.

ii) 2005ನೇ ಸಾಲಿನ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ.

10) ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

† **ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿವಾಳಪ್ಪ(ಹೂವಿನಹಿಪ್ಪರಗಿ):-** ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಬಿಜಾಪುರ ಜಿಲ್ಲೆಯಲ್ಲಿ ಇವತ್ತು ಜಿಲ್ಲೆಯ ನೀರಾವರಿ ಸೌಲಭ್ಯ ಸಿಗಬೇಕು ಅಂತ ಜನ ಬೀದಿಗೆ ಇಳಿದು ಹೋರಾಟ ಮಾಡಲಿಕ್ಕೆ ಹೊರಟ್ಟಿದ್ದಾರೆ. ಇವತ್ತು ಸಂಸದ ಮಾನ್ಯ ಬಸವನಗೌಡರ ನೇತೃತ್ವದಲ್ಲಿ ಪಕ್ಷಾತೀತವಾಗಿ ಧರಣಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಆ ಸ್ಥಳಕ್ಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕಂದಾಯ ಸಚಿವರನ್ನು ಕಳುಹಿಸಿಕೊಟ್ಟಿದ್ದೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಧನ್ಯವಾದಗಳನ್ನು ಸರ್ಕಾರಕ್ಕೆ ಅರ್ಪಿಸುತ್ತೇನೆ. ಇವತ್ತು ಆ ಹೋರಾಟ ಜಿಲ್ಲೆ ಸಮಗ್ರ ನೀರಾವರಿಯಾಗಬೇಕು, ಜಿಲ್ಲೆಯಲ್ಲಿ ಇರುವಂತಹ ಕೆರೆಗಳಲ್ಲಿ ನೀರು ತುಂಬಿಸಬೇಕು, ನಮ್ಮ ಜಿಲ್ಲೆ ಇವತ್ತು ನಾಲ್ಕು ವರ್ಷ ಸತತವಾಗಿ ಬರಗಾಲದಿಂದ ತತ್ತರಿಸುತ್ತಿದೆ. ಕುಡಿಯಲಿಕ್ಕೆ ನೀರು ಸಿಗದಂತೆ ಆಗಿದೆ, ಇಂತಹ ಒಂದು ಪರಿಸ್ಥಿತಿಯಲ್ಲಿ ಜನ ಬೀದಿಗೆ ಇಳಿದು ಸಂಸದರ ನೇತೃತ್ವದಲ್ಲಿ 31ನೇ ತಾರೀಖಿನಿಂದ ಧರಣಿ ಸತ್ಯಾಗ್ರಹ ಮಾಡಲಿಕ್ಕೆ ಹತ್ತಿದ್ದಾರೆ. ಅದರಲ್ಲಿ 22ನೇ ತಾರೀಖಿನಿಂದ ಭೀಮಾನದಿಯಿಂದ ಕೃಷ್ಣವರೆಗೆ ಪಾದಯಾತ್ರೆಯನ್ನೂ ಸಹ ಮಾಡಿದ್ದಾರೆ. ಆ ಪಾದಯಾತ್ರೆ ನನ್ನ ಮತಕ್ಷೇತ್ರದಲ್ಲಿ ಬಂದಾಗ ನಾನೂ ಸಹ ಆ ಪಾದಯಾತ್ರೆಯಲ್ಲಿ ಭಾಗವಹಿಸಿದ್ದೆ. ಅಂತಹ ಒಂದು ಸಂದರ್ಭದಲ್ಲಿ 30ನೇ ತಾರೀಖಿನದಿವಸ ಆಲಮಟ್ಟಿಯಲ್ಲಿ ಬೃಹತ್ ಸಮಾವೇಶವನ್ನೂ ಸಹ ರೈತರು ಮಾಡಿದರು. ಆ ಸಮಾವೇಶಕ್ಕಾದರೂ ಇವತ್ತು ಸರ್ಕಾರ ಸ್ಪಂದಿಸಿ, ಹೋಗಿ ಏನಾದರೂ ಅಲ್ಲಿ ಈ ಒಂದು ಕೆಲಸ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಬೇಕಾಗಿತ್ತು. ಆದರೂ ಸಹ ಯಾರೂ ಸರ್ಕಾರದ ಪ್ರತಿನಿಧಿ ಅಲ್ಲಿಗೆ ಹೋಗಲಿಲ್ಲ. ಆ ನಂತರ ನಾವು ಆ ಒಂದು ಸಮಾವೇಶ ಮುಗಿಸಿಕೊಂಡು ಜನವರಿ 31, ಫೆಬ್ರವರಿ 1 ರಂದು ಈ ಒಂದು ವಿಧಾನ ಸಭೆಯಲ್ಲಿ ಸರ್ಕಾರದ

† (ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.)